**ಎಲ್.ಎ.ಸಿ.ನಂ. 03/2014**
**ಪಿಡಬ್ಲ್ಯೂ 01**

ದಿನಾಂಕಃ *23-10-2020* ರಂದು ಸಾಕ್ಷಿಗೆ ಪ್ರಮಾಣವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಸ್ ಎಸ್ ಸಿ ವಕೀಲರವರಿಂದ**

ಸ್ವಾದೀನಪಡಿಸಿಕೊಂಡ ಸರ್ವೆ ನಂಬರುಗಳ ಮಾಲೀಕರು ರಾಧಿಕಾ ಗಣೇಶನ್ ಎನ್ನುವವರಾಗಿದ್ದಾರೆ. ರಾಧಿಕಾ ಗಣೇಶನ್ ರವರು ನನ್ನ ಸಹೋದರಿಯ ಮಗಳಾಗಿದ್ದಾರೆ. ಸದರಿ ಆಸ್ತಿಗಳಲ್ಲಿ ಅಡಿಕೆ ಬೆಳೆಯಲಾಗಿತ್ತು. *1*ನೇ ಎದುರುದಾರರು ವಿವಾದಿತ ಆಸ್ತಿ ಮತ್ತು ಅದರ ಮೇಲಿರುವ ಮರ-ಮುಟ್ಟುಗಳಿಗೆ ಸೇರಿದಂತೆ ಸೂಕ್ತವಾದ ಪರಿಹಾರ ಕೊಟ್ಟಿದ್ದಾರೆಂದರೆ ಸರಿಯಲ್ಲ. ಅವರು ಕೊಟ್ಟಿರುವ ಮೊತ್ತ ಅತಿ ಕಡಿಮೆ ಪರಿಹಾರವಾಗಿರುತ್ತದೆ. ವಾರ್ಷಿಕವಾಗಿ ದಾವಾ ಆಸ್ತಿಯಿಂದ ಬರುತ್ತಿದ್ದ ಆದಾಯ ನಮಗೆ ನಷ್ಟ ಆಗಿರುತ್ತದೆ. ಆ ಸಮಯದಲ್ಲಿ ಒಂದು ಕ್ವಿಂಟಾಲ್ ಗೆ ಬೇಯಿಸಿದ ಅಡಿಕೆಗೆ *40* ಸಾವಿರ ರೂ. ಬೆಲೆ ಇತ್ತು. ಒಂದು ಎಕರೆಗೆ *10-11* ಕ್ವಿಂಟಾಲ್ ನಷ್ಟು ಬೇಯಿಸಿದ ಅಡಿಕೆ ಬೆಳೆಯಬಹುದು. ಚಾನಲ್ ನಮ್ಮ ಆಸ್ತಿಯ ಮಧ್ಯೆದಲ್ಲಿ ಹಾದುಹೋಗಿಲ್ಲ ಎಂದರೆ ಸರಿಯಲ್ಲ. ಆ ರೀತಿ ಹಾದು ಹೋಗಿದ್ದರಿಂದ ನಮಗೆ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ಕೊಳವೆ ಬಾವಿಗೆ, ವಿದ್ಯುತ್‌ಚ್ಛಕ್ತಿ ಸಂಪರ್ಕಕ್ಕೆ ಹಾಗೂ ತಂತಿ ಬೇಲಿಗೂ ಕೂಡಾ ಯಾವುದೇ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಒಂದು ಕ್ವಿಂಟಾಲ್ ಅಡಿಕೆಗೆ *40* ಸಾವಿರ ಬೆಲೆ ಇಲ್ಲ ಎಂದರೆ ಸರಿಯಲ್ಲ. ಈಗಾಗಲೇ ಕೊಟ್ಟಿದ್ದ *28* ಲಕ್ಷಕ್ಕೂ ಹೆಚ್ಚು ಮೊತ್ತದ ಪರಿಹಾರ ಸೂಕ್ತವಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಪರಿಹಾರ ಘೋಷಣೆ ಮಾಡುವಾಗ ಸೂಕ್ತವಾದ ಕ್ರಮ ಕೈಗೊಳ್ಳದೇ ಎಸ್ಟಿಮೇಟ್ ಮಾಡಿದ್ದಾರೆಂದು ಹೇಳುತ್ತಾರೆ.

(*2*ನೇ ಎದುರುದಾರರು ಗೈರು ಹಾಜರು. ಆದ್ದರಿಂದ ಪಾಟೀ ಸವಾಲಿಗೆ ಮುಂದೂಡಲಾಗಿದೆ.)

*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)*

*ಓ ಹೇ ಕೇ ಸ ಇ ಎ ಒ*

ಸಹಿ/-
(ಎಂ ಸಿ ನಂಜೇಗೌಡ)
ಹಿರಿಯ ಸಿವಿಲ್ ನ್ಯಾಯಾಧೀಶರು,
ತರೀಕೆರೆ.